ದಿನಾಂಕಃ 04-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ – ಶ್ರೀ ಟಿ. ಎಮ್ ಎಸ್ ವಕೀಲರಿಂದ.

ನನ್ನ ಹೆಸರು ವಿ ದುರ್ಗಪ್ಪ. ನನ್ನ ಹೆಸರಿನಲ್ಲಿ ವಿ ಅಂದರೆ ವಡ್ಡಿನ ಕಟ್ಟಿ ಅಂದರೆ ಸರಿ. ನನ್ನ ತಾಯಿಯ ಹೆಸರು ವಡ್ಡಿನ ಕಟ್ಟಿ ಹಾಲಮ್ಮ . ನನ್ನ ತಾಯಿಯ ತಂದೆಯ ಹೆಸರು ವಡ್ಡಿನ ಕಟ್ಟಿ ಭೀಮಪ್ಪ ಅಂದರೆ ಸರಿ. ನನ್ನ ತಾಯಿ ದೇವದಾಸಿ ಅಂದರೆ ಸರಿ. ಸಾಕ್ಷಿಯು ಮುಂದುವರಿದು ತಾನು 8 ರಿಂದ 10 ವರ್ಷ ವಯಸ್ಸಿದ್ದಾಗ ನನ್ನ ತಾಯಿ ಮದುವೆ ಆಗಿರುವುದಾಗಿ ನುಡಿಯುತ್ತಾರೆ ನನ್ನ ತಾಯಿಗೆ ನಾವು ಸೊಲ್ಲಪ್ಪ ಮತ್ತು ದುರ್ಗಪ್ಪ ಎಂಬ ಇಬ್ಬರು ಜನ ಮಕ್ಕಳು . ಸೊಲ್ಲಪ್ಪ ನನನಗಿಂತ 3 ರಿಂದ 4 ವರ್ಷ ಚಿಕ್ಕವನು . ನನ್ನ ತಾಯಿ ಮದುವೆ ಆದಾಗ ಸೊಲ್ಲಪ್ಪನಿಗೆ 1 ರಿಂದ 2 ವರ್ಷ ವಯಸ್ಸು ಇರಬಹುದು .

ನನ್ನ ತಾಯಿ 2001 ರಲ್ಲಿ ತೀರಿಕೊಂಡಿರಬಹುದು . ನನ್ನ ತಾಯಿ ದೇವದಾಸಿಯವರಿಗೆ ಸರ್ಕಾರ ನೀಡುವ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡಿದ್ದರು ಅಂದರೆ ಸರಿಯಲ್ಲ. ನನ್ನ ತಾಯಿ ಮದುವೆಯಾದ ಬಗ್ಗೆ ದಾಖಲೆಗಳು ಇವೆಯೇ ? ಅಂದರೆ ಸಾಕ್ಷಿಯು ಮನೆಗೆ ಬೆಂಕಿ ಬಿದ್ದ ಕಾರಣ ಎಲ್ಲಾ ದಾಖಲೆಗಳು ಸುಟ್ಟು ಹೋಗಿರುವುದಾಗಿ ನುಡಿಯುತ್ತಾರೆ . ಸದರಿ ದಾಖಲೆಗಳು ಯಾವ ತರಹದ ದಾಖಲೆಗಳು ಎಂದು ನನಗೆ ಗೊತ್ತಿರವುದಿಲ್ಲ . ಸದರಿ ದಾಖಲೆಗಳು ಸಮಾರು 40 ವರ್ಷಗಳ ಹಿಂದೆ ಸುಟ್ಟು ಹೋಗಿರುತ್ತೆವೆ . ಸದರಿ ವಿಚಾರವಾಗಿ ಯಾವುದೇ ದೂರು ನೀಡಿರುವುದಿಲ್ಲ .

ನನ್ನ ತಾಯಿಯ ಹೆಸರು ಮತದಾರರ ಪಟ್ಟಿಯಲ್ಲಿ ನಮೂದು ಇದೆ . ಸದರಿ ದಾಖಲೆಯಲ್ಲಿ ನನ್ನ ತಾಯಿುಯ ಗಂಡನ ಹೆಸರು ಓಬಪ್ಪ ಎಂದು ನಮೂದು ಇದೆ . ಸುಮಾರು 40 ವರ್ಷಗಳಿಂದ ನನ್ನ ತಾಯಿಯ ಹೆಸರು ಮತದಾರರ ಪಟ್ಟಿಯಲ್ಲಿ ನಮೂದು ಇದೆ ಸದರಿ ಮತದಾರರ ಪಟ್ಟಿಯನ್ನು ಹಾಜರು ಪಡಿಸಿರುವುದಿಲ್ಲ .

ನಾನು ಎಸ್ ಎಸ್ ಎಲ್ ಸಿ ಯವರೆಗೆ ಓದಿರುತ್ತೇನೆ . ನಾನು ಕೂಡ್ಲಿಗಿಯ ಸೊಲ್ಲಮ್ಮನ ಮಂದಿರ ಸರ್ಕಾರಿ ಪ್ರಾಥಮಿ ಶಾಲೆಯಲ್ಲಿ ಓದಿರುತ್ತೇನೆ . ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ತಾಯಿಯ ಹೆಸರು ನಮುಾದು ಇರುತ್ತದೆ . ನಾನು ಸದರಿ ಶಾಲೆಯಲ್ಲಿ 7 ನೇ ತರಗತಿಯವರೆಗೆ

ಓದಿರುತ್ತೇನೆ . ತದ ನಂತರ ಕೂಡ್ಲಿಗಿಯ ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ . ಸದರಿ ದಾಖಲೆಗಳಲ್ಲಿಯೂ ಸಹ ನನ್ನ ತಾಯಿಯ ಹೆಸರು ನಮೂದು ಇದೆ . ನನ್ನ ಎಸ್ ಎಸ್ ಎಲ್ ಸಿ ಅಂಕಪಟ್ಟಿಯಲ್ಲಿಯೂ ಸಹ ನನ್ನ ತಾಯಿಯ ಹೆಸರು ನಮೂದು ಇದೆ .ನಾನು ಮುಂಚೆ ಕಟ್ಟಕ ಕಟ್ಟುವ ಕೆಲಸ ಮಾಡುತ್ತಿದೆ ಈಗ 15 ವರ್ಷಗಳಿಂದ ಎಲ್ ಐ ಸಿ ಏಜೆಂಟ್ ಮತ್ತು ತರಕಾರಿ ವ್ಯಾಪಾರ ಮಾಡುತ್ತಿದ್ದೇನೆ. ನಾನು ಎಲ್ ಐ ಸಿ ಕಚೇರಿಗೆ ನೀಡಿದ ದಾಖಲೆಗಳಲ್ಲಿ ನನ್ನ ತಂದೆ ಮತ್ತು ತಾಯಿಯ ಇಬ್ಬರ ಹೆಸರೂ ಸಹ ನಮೂದು ಇದೆ . ಸದರಿ ದಾಖಲೆಗಳಲ್ಲಿ ನನ್ನ ತಾಯಿಯ ಹೆಸರು ಮಾತ್ರ ನಮಾದು ಇದೆ ಸಾಕ್ಷಿಯು ತನ್ನ ತಾಯಿಯ ಹೆಸರನ್ನು ಮಾತ್ರ ನೀಡಿರುವುದಾಗಿ ನುಡಿಯುತ್ತಾರೆ .

ನನ್ನ ತಮ್ಮ ಸೊಲ್ಲಪ್ಪ ಸಹ ಸೊಲ್ಲಮ್ಮನ ಮಂದಿರ ಶಾಲೆಯಲ್ಲಿ ಓದಿರುತ್ತಾನೆ . ನನ್ನ ತಮ್ಮನ ಶಾಲಾ ಧಾಖಲಾತಿಗಳಲ್ಲಿ ನಮ್ಮ ತಾಯಿಯ ಹೆಸರು ಮಾತ್ರ ನಮೂದು ಇದೆ ಅಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ತಮ್ಮನ ಶಾಲಾ ದಾಖಲಾತಿಗಳಲ್ಲಿ ನಮ್ಮ ತಾಯಿಯ ಹೆಸರು ವಡ್ಡನ ಕಟ್ಟಿ ಹಾಲಮ್ಮ ಎಂದು ನಮೂದು ಇದೆ ಅಂದರೆ ಸರಿ. ಸದರಿ ಶಾಲಾ ದಾಖಲಾತಿಗಳಲ್ಲಿ ನಮ್ಮ ತಂದೆಯು ಹೆಸರು ನಮೂದು ಇಲ್ಲಾ ಅಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ನನ್ನ ತಮ್ಮ ಸೊಲ್ಲಪ್ಪನ ಆಧಾರ ಗುರತಿನ ಚೀಟಿ ಮತ್ತು ಚುನಾವಣೆ ಗುರುತಿನ ಚೀಟಿಗಳಲ್ಲಿ ನಮ್ಮ ತಾಯಿಯ ಹೆಸರು ಮಾತ್ರ ನಮೂದು ಇದೆ ಅಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ನನ್ನ ಆಧಾರ ಗುರುತಿನ ಚೀಟಿ ಮತ್ತು ಚುನಾವಣೆ ಗುರುತಿನ ಚೀಟಿಗಳಲ್ಲಿಯೂ ಸಹ ನನ್ನ ತಾಯಿಯ ಹೆಸರು ಮಾತ್ರ ನಮೂದು ಇದೆ ಅಂದರೆ ಸರಿಯಲ್ಲ.

ವಡ್ಡಿನ ಕಟ್ಟೆ ಅಂದರೆ ನಮ್ಮ ತಾಯಿಯ ತಂದೆಯ ಕಟುಂಬ ಅಂದರೆ ಸರಿ. ವಾದಿ ಓಬಪ್ಪ ಇವರು ಕಾವಲಿ ಕುಟುಂಬ ಅಂದರೆ ಸರಿ. ಅಮ್ಮನಕೇರೆ ಗ್ರಾಮದ ಸರ್ವೆ ನಂಬರ್ 241 ಬಿ -2 ಬಿ ಆಸ್ತಿಯನ್ನು ನಾನು ಮಾಳಗಿ ನಾಗಮ್ಮ ಇವರಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತೇನೆ ಅಂದರೆ ಸಾಕ್ಷಿಯು ತನ್ನ ತಾಯಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ .

ಕೂಡ್ಲಿಗಿಯ ನೀಲಕಂಟೇಶ್ವರ ಸಾಮಿಲ್ ಹತ್ತಿರ ಇರುವ ಬಯಲು ಜಾಗವನ್ನು ನನ್ನ ತಾಯಿ ವೆಂಕಟೇಶ್ ಇವರ ಪರವಾಗಿ ಮಾರಾಟ ಮಾಡಿರುತ್ತಾರೆ ಅಂದರೆ ಸರಿ. ಸದರಿ ದಾಖಲೆಯಲ್ಲಿ

ನನ್ನ ತಾಯಿಯ ಹೆಸರಿನ ಮುಂದೆ ಅವರ ತಂದೆಯ ಹೆಸರು ಮಾತ್ರ ನಮೂದು ಇದೆ ಅಂದರೆ ಸರಿ.

ನಿಸಿ 1 ದಾಖಲೆಯನ್ನು ಸೃಷ್ಟಿ ಮಾಡಿ ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ನನ್ನ ತಾಯಿ ಹಾಲಮ್ಮ ಇವರು ಕಾವಲಿ ಓಬಪ್ಪ ಇವರನ್ನು ಮದುವೆ ಆಗಿರುವುದಿಲ್ಲ ಅಂದರೆ ಸರಿಯಲ್ಲ. ನಾವು ಕಾವಲಿ ಓಬಪ್ಪ ಇವರ ವಾರಸುದಾರರು ಅಲ್ಲಾ ಅಂದರೆ ಸರಿಯಲ್ಲ. ಕಾವಲಿ ಓಬಪ್ಪ ಇವರಿಗೆ ಮದುವೆ ಆಗಿರಲಿಲ್ಲ ಅವರು ಮದುವೆ ಆಗದೇ ತಿರಿಕೊಂಡಿರುತ್ತಾರೆ ಅಂದರೆ ಸರಿಯಲ್ಲ.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.

2 ಒ ಎಸ್

3 ಒ ಎಸ್